

**ಶೂಟಿಂಗ್‌ನಲ್ಲಿ ಮನು ಭಾಕರ್ ಜಯಿಸಿರುವ ಎರಡು ಕಂಚಿನ ಪದಕಗಳು, ಒಲಿಂಪಿಕ್ಸ್ ಮಹಾಪಯಣದಲ್ಲಿ ಭಾರತ ನೆಟ್ಟಿರುವ ಚಿನ್ನದ ಮೈಲಿಗಲ್ಲುಗಳು.**

# ಮನು ಮಿಂಚು ಜೋಡಿ ಕಂಚು

■ ಪ್ರಮೋದ

ಮೊದಲ ಬಾರಿಗೆ 'ಕ್ರೀಡಾ ಟ್ರ್ಯಾಕ್'ನಲ್ಲಿ ಅಭ್ಯಾಸ ಆರಂಭಿಸಿದ ಯುವ ಕ್ರೀಡಾಪಟುವನ್ನು ಅಥವಾ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪದಕ ಗೆದ್ದವರನ್ನು 'ನಿಮ್ಮ ಬದುಕಿನ ಗುರಿ ಏನು?' ಎಂದು ಕೇಳಿನೋಡಿ: 'ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬೇಕು' ಎನ್ನುವುದೇ ಪ್ರತಿಯೊಬ್ಬ ಅಥ್ಲೀಟ್‌ನ ಉತ್ತರವಾಗಿರುತ್ತದೆ.

ಎಲ್ಲ ಕ್ರೀಡಾಕೂಟಗಳ ದೊಡ್ಡಣ್ಣ ಎನಿಸಿರುವ ಒಲಿಂಪಿಕ್ಸ್ ಮನುಷ್ಯ ಸಂಬಂಧಗಳನ್ನು ಉನ್ನತೀಕರಿಸುವ ವಿಶ್ವದ ಬಹುದೊಡ್ಡ ಕ್ರೀಡಾಮೇಳ. ಕೆಲವರಿಗೆ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡರೆ ಸಾಕು ಕ್ರೀಡಾಬದುಕು ಸಾರ್ಥಕ ಎನ್ನುವ ತೃಪ್ತಭಾವ ಇರುತ್ತದೆ. ಪದಕ ಗೆದ್ದುಬಿಟ್ಟರಂತೂ ಕ್ರೀಡಾಲೋಕದ ಪಾಲಿಗೆ ಅನನ್ಯ ಸಾಧನೆಯೇ ಸರಿ. ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳು ಬಂದರೆ? ಆ ಸಾಧನೆ ಐತಿಹಾಸಿಕ, ಅವಿಸ್ಮರಣೀಯ. ಅಂಥದ್ದೊಂದು ಸಂಭ್ರಮ ಈಗ ಭಾರತದಲ್ಲಿ ಮನೆ ಮಾಡಿದೆ.

PARiS 2024

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನ ಶೂಟಿಂಗ್ ಸ್ಪರ್ಧೆಯಲ್ಲಿ 22 ವರ್ಷದ ಮನು ಭಾಕರ್ ಎರಡು ಕಂಚಿನ ಪದಕಗಳನ್ನು ಗೆಲ್ಲುವ ಮೂಲಕ ಕೋಟ್ಯಂತರ ಕ್ರೀಡಾಪ್ರೇಮಿಗಳ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆದುಕೊಂಡಿದ್ದಾರೆ. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಗಗನ್ ನಾರಂಗ್ ಹಾಗೂ ವಿಜಯಕುಮಾರ್ ಶೂಟಿಂಗ್‌ನಲ್ಲಿ ಪದಕಗಳನ್ನು ಬಾಚಿಕೊಂಡ ಬಳಿಕ, ಹಿಂದಿನ ರಿಯೊ ಡಿ ಜನ್ವೆರೊ ಮತ್ತು ಟೋಕಿಯೊ ಒಲಿಂಪಿಕ್ಸ್‌ಗಳಲ್ಲಿ ಶೂಟಿಂಗ್‌ನಲ್ಲಿ ಪದಕಗಳ ಬರ ಕಾಡಿತ್ತು.

2004ರ ಅಥೆನ್ಸ್‌ನಲ್ಲಿ ಬೆಳ್ಳಿ (ರಾಜ್ಯವರ್ಧನ್ ಸಿಂಗ್ ರಾಠೋಡ್), 2008ರಲ್ಲಿ ಲಂಡನ್‌ನಲ್ಲಿ ಚಿನ್ನದ (ಅಭಿನವ್ ಬಿಂದ್ರಾ) ಪದಕಗಳು ಭಾರತಕ್ಕೆ ಶೂಟಿಂಗ್‌ನಲ್ಲಿ ಲಭಿಸಿದ್ದವು. ಸತತ ಮೂರು ಒಲಿಂಪಿಕ್ಸ್‌ನಲ್ಲಿ ನಾಲ್ಕು ಪದಕಗಳು! ಹೀಗಾಗಿ, ಪ್ರತಿ ಒಲಿಂಪಿಕ್ಸ್ ಆರಂಭವಾದಾಗ ಶೂಟಿಂಗ್ ಮೇಲೆ ಪದಕಗಳ ನಿರೀಕ್ಷೆಯೂ ಸಹಜವಾಗಿತ್ತು. ಮನು ಭಾಕರ್ ಈಗಿನ ಸಾಧನೆ ಶೂಟಿಂಗ್ 'ಪಿಸ್ತೂಲ್'ಗೆ ಕಳಶವಿಟ್ಟಂತೆ ಆಗಿದೆ.

## ಬಾಲ್ಯದಿಂದಲೂ ಕ್ರೀಡಾಪಟು

ಹರಿಯಾಣದ ಜಜ್ಜರ್ ಜಿಲ್ಲೆಯ ಮನು ಭಾಕರ್ ವಿಶ್ವಶ್ರೇಷ್ಠ ಕ್ರೀಡಾಕೂಟಗಳಲ್ಲಿ ಗೆದ್ದ ಪದಕಗಳು ಎಂಥವರಲ್ಲಿಯೂ ಬೆರಗು ಮೂಡಿಸುತ್ತವೆ. ಸಾಧನೆಯ ಆಸೆ ಹೊತ್ತ ಕ್ರೀಡಾಪಟುಗಳಿಗೆ ಪ್ರೇರಣೆಯ ಕಥನವಾಗುತ್ತದೆ.

ಶೂಟರ್ ಆಗಿ ಮನು ಈಗ ದೊಡ್ಡ ಸಾಧನೆ ಮಾಡಿದ್ದರೂ ಅವರು ಅಥ್ಲೆಟಿಕ್ಸ್, ಟೆನಿಸ್, ಸ್ಕೇಟರ್, ಬಾಕ್ಸಿಂಗ್ ಮತ್ತು ಸಮರಕಲೆ 'ಥಂಗ್ ಟಾ'ನಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈಗ 10 ಮೀಟರ್ ಏರ್ ಪಿಸ್ತೂಲ್ ವೈಯಕ್ತಿಕ ಸ್ಪರ್ಧೆಯಲ್ಲಿ ಮತ್ತು ಇದೇ ಸ್ಪರ್ಧೆಯ ಮಿಶ್ರ ತಂಡ ವಿಭಾಗದಲ್ಲಿ ಕಂಚು ಗೆದ್ದುಕೊಂಡಿದ್ದಾರೆ. ಈ ಮೂಲಕ ಅವರು ದೇಶದ ಸ್ವಾತಂತ್ರ್ಯಾನಂತರ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಪಡೆದ ಭಾರತದ ಮೊದಲ ಕ್ರೀಡಾಪಟು ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಒಲಿಂಪಿಕ್ಸ್‌ನ ಶೂಟಿಂಗ್‌ನಲ್ಲಿ ಪದಕ ಗೆದ್ದ ದೇಶದ ಮೊದಲ ಮಹಿಳಾ ಶೂಟರ್ ಎನ್ನುವ ಕೀರ್ತಿಯೂ ಅವರದಾಗಿದೆ.

ಮನು 2018ರಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದಾಗ ಹದಿನಾರರ ಬಾಲೆ. 2018ರ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಚಿನ್ನ ಗೆಲ್ಲುವ ಮೂಲಕ ಈ ಸಾಧನೆ ಮಾಡಿದ ದೇಶದ ಕಿರಿಯ ಶೂಟರ್ ಎನ್ನುವ ಶ್ರೇಯ ಪಡೆದುಕೊಂಡರು. ಇದಕ್ಕೂ ಒಂದು ವರ್ಷ ಮೊದಲು, ಏಷ್ಯನ್ ಜೂನಿಯರ್